## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 1) ಶ್ರೀಮತಿ ಚಂದ್ರಕಲಾ, 2) ಸಂಜೀವ ಕುಮಾರ್, 3)ಶ್ರೀ ಆನಂದ, 4) ಶಾಂತಕುಮಾರ್, 5)ಶ್ರೀಮತಿ ಮೇರಮ್ಮ ಮತ್ತು 6)ಶ್ರೀ ಸುಜೀತ್ ಕುಮಾರ್, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ ಇವರು ಗ್ರಾಮ ಪಂಚಾಯಿತಿಯಲ್ಲಿ 13ನೇ ಹಣಕಾಸುಯೋಜನೆ, ನಿಧಿ-1 ಮತ್ತು ನೀರು ಸರಬರಾಜು ಯೋಜನೆಯಡಿಯಲ್ಲಿ ತಮ್ಮ ಮತ್ತು ತಮ್ಮ ಸಂಬಂಧಿಕರ ಹೆಸರಿನಲ್ಲಿ ಚೆಕ್‌ನ್ನು ಪಡೆದು ಸರ್ಕಾರದ ಹಣವನ್ನು ದುರುಪಯೋಗಿಸಿಕೊಂಡಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಸದಸ್ಯತ್ವ ರದ್ದುಪಡಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೀದರ್ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿಪಂಬಿ/ಗ್ರಾಪಂ/ಸಿಆರ್–13/2018–19, ದಿನಾಂಕ:06–07–2018.
2) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/1135/ಗ್ರಾಪಂಅ/2018 ದಿನಾಂಕ:02–02–2019.
3) ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ:205:ಗ್ರಾಪಂಅ:2019, ದಿನಾಂಕ:10–05–2019.
4) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/143/2018–19/867, ದಿನಾಂಕ:20–05–2019.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್ ಜಿಲ್ಲೆ ರವರ ದಿನಾಂಕ:06–07–2018ರ ಪತ್ರದಲ್ಲಿ ಬೀದರ್ ತಾಲ್ಲೂಕಿನ ಕಪಲಾಪುರ(ಎ) ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು/ಸದಸ್ಯರು ಹಣಕಾಸಿನ ಅವ್ಯವಹಾರದಲ್ಲಿ ತೊಡಗಿರುವುದಾಗಿ ಶ್ರೀ ಹಣಮಂತ ತಂದೆ ಬಸವರಾಜು ರವರು ಸಲ್ಲಿಸಿದ ದೂರಿನನ್ವಯ ಸದರಿ ಜಿಲ್ಲಾ ಪಂಚಾಯಿತಿಯಲ್ಲಿನ ಮುಖ್ಯಲೆಕ್ಕಾಧಿಕಾರಿಗಳು ತನಿಖೆ ಕೈಗೊಂಡು ಸರ್ಕಾರದ ವಿವಿಧ ಯೋಜನೆಯ ಅನುದಾನದಡಿ ಕಾರ್ಯನಿರ್ವಹಿಸಿದ ಕಾಮಗಾರಿಯ ಚೆಕ್‌ನ್ನು 13ನೇ ಹಣಕಾಸುಯೋಜನೆ, ನಿಧಿ–1 ಮತ್ತು ನೀರು ಸರಬರಾಜು ಯೋಜನೆಯಡಿಯಲ್ಲಿ ತಮ್ಮ ಮತ್ತು ತಮ್ಮ ಸಂಬಂಧಿಕರ ಹೆಸರಿನಲ್ಲಿ ಚೆಕ್‌ನ್ನು ಪಡೆದು ಸರ್ಕಾರದ ಹಣವನ್ನು ದುರುಪಯೋಗಿಸಿಕೊಂಡಿರುವುದಾಗಿ ಈ ಬಗ್ಗೆ ಸದರಿ ವರದಿಯ ಆಧಾರದ ಮೇಲೆ ಆರೋಪಿತರಿಗೆ ಕಾರಣ ಕೇಳುವ ನೋಟಿಸ್ಸು ಜಾರಿ ಮಾಡಲಾಗಿದ್ದರೂ ಸಹ ಆರೋಪಿತರು ಉತ್ತರ ಸಲ್ಲಿಸಿಲ್ಲವೆಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

ಮೇಲೆ ಓದಲಾದ (2)ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಮತ್ತು 48(4) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳ ಮೇಲೆ ದುರ್ವತನೆ, ಅಧಿಕಾರ ಮತ್ತು ಹಣ ದುರುಪಯೋಗಕ್ಕಾಗಿ ಕ್ರಮ ಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಲಾಗಿದೆ.

ಅದರಂತೆ ಮೇಲೆ ಓದಲಾದ (3)ರಲ್ಲಿ ಕಡತದ ಮೂಲ ಪ್ರತಿಗಳನ್ನು ದಾಖಲೆಗಳೊಂದಿಗೆ ವರದಿಯನ್ನು ಕಲಬುರಗಿ ಪ್ರಾದೇಶಿಕ ಆಯುಕ್ತರಿಗೆ ಕಳುಹಿಸಿ, ಚುನಾಯಿತ ಸದಸ್ಯರುಗಳ ಮೇಲೆ ಇರುವ ಆರೊಪಗಳ ಕುರಿತು ನಿಯಮಾನುಸಾರ ವಿವರವಾದ ವಿಚಾರಣೆ ನಡೆಸಿ, ವಿಚಾರನಾ ವರದಿ ಸಲ್ಲಿಸುವಂತೆ ಕೋರಲಾಗಿತ್ತು.

ಮೇಲೆ ಓದಲಾದ (4) ರ ಪತ್ರದಲ್ಲಿ ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರು ಆರೋಪಿತ ಸದಸ್ಯರುಗಳ ವಿರುದ್ಧ ನಿಯಮಾನುಸಾರ ವಿಚಾರಣೆ ನಡೆಸಿ ವಿಚಾರಣಾ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳ ವಾದ ಮತ್ತು ಪ್ರತಿವಾದಗಳನ್ನು ಹಾಲಿಸಿ ಅವರುಗಳು ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಪ್ರತಿಯೊಂದು ಸದಸ್ಯರ ಮೇಲೆ ಮಾಡಲಾದ ಆರೋಪದ ಕುರಿತು ವಿವರವಾಗಿ ವಿಚಾರಣೆ ನಡೆಸಿದ್ದು, ಆ ಬಗ್ಗೆ ವಿಚಾರಣಾ ವರದಿಯಲ್ಲಿ ದಾಖಲಿಸಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

ಸರ್ಕಾರವು ಸದರಿ ವಿಚಾರಣಾ ವರದಿಯನ್ನು ಕೂಲಕಷವಾಗಿ ಪರಿಶೀಲಿಸಿ, ನಿಯಮಾನುಸಾರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 43(ಎ) ರಡಿ ಕ್ರಮ ಜರುಗಿಸುವ ಮುನ್ನ ಆರೋಪಿತ ಸದಸ್ಯರಾದ 1)ಶ್ರೀಮತಿ ಜೈಶ್ರೀ, 2)ಶ್ರೀಮತಿ ಚಂದ್ರಕಲಾ, 3) ಸಂಜೀವ ಕುಮಾರ್, 4)ಶ್ರೀಮತಿ ಪ್ರಭಾವತಿ, 5) ರುಕ್ಮಿಣಿ, 6) ಆನಂದ, 7) ಶಾಂತಕುಮಾರ್, 8) ಶ್ರೀ ಅಮೃತಪ್ಪ, 9)ಶ್ರೀಮತಿ ಮೇರಮ್ಮ ಮತ್ತು 10)ಶ್ರೀ ಸುಜೀತ ಕುಮಾರ್ ಸದಸ್ಯರುಗಳು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ ಇವರಿಗೆ ದಿನಾಂಕ:24-07-2018 ರಂದು ಕಾರಣ ಕೇಳುವ ನೋಟಿಸ್ಸನ್ನು ಜಾರಿಮಾಡಲಾಗಿದೆ. ಈ ಬಗ್ಗೆ ಎಲ್ಲಾ ಆರೋಪಿತ ಸದಸ್ಯರು ಸದರಿ ಕಾರಣ ಕೇಳುವ ನೋಟಿಸ್ಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಆರೋಪಗಳನ್ನು ನಿರಾಕರಿಸಿರುತ್ತಾರೆ. ಆದರೆ ಈ ಬಗ್ಗೆ ಸರ್ಕಾರವು ತನಿಖಾ ವರದಿಯನ್ನು ಕುಲಂಕೂಷವಾಗಿ ಪರಿಶೀಲಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(v) ರನ್ವಯ ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ, ಕರಾರು ಸಂಬಂಧ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯೇಕ್ಷವಾಗಿ ತೊಡಗಿರುವುದು ಕಂಡು ಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅಂಥ ಅನ್ಯಥಾ ಸಂಘ ಸಂಸ್ಥೆ ಮಂಡಳಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು

**-ಕಂಡು ಬಂದರೆ, ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು.**

**ವಿವರಣೆ-ಈ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದ ಹತ್ತಿರದ ಬಂಧುಗಳು ಎಂದರೆ:-**

**(ಎ)ಆಕೆಯ ಅಥವಾ ಆತನೊಂದಿಗೆ ವಾಸವಾಗಿರುವ ವ್ಯಕ್ತಿ ಪತ್ನಿ ಅಥವಾ ಪತಿ.**

**(ಬಿ) ಮಗ ಅಥವಾ ಮಗಳು ಅಥವಾ ಮಲಮಗ ಅಥವಾ ಮಲಮಗಳು.**

**(ಸಿ) ಅಂಥ ವ್ಯಕಿಯ ಮೇಲೆ ಸಂಪೂರ್ಣವಾಗಿ ಅವಲಂಬಿಂತನಾಗಿರುವ, ರಕ್ತ ಸಂಬಮಧವಾಗಿರಲಿ ಅಥವಾ ವಿವಾಹದಿಂದಾಗಲಿ, ಸಂಬಂಧಿಸಿದ ಯಾವೊಬ್ಬ ಇತರ ವ್ಯಕ್ತಿ, ಎಂದು ವಿವರಿಸಲಾಗಿದೆ.**

ಮೇಲ್ಕಂಡ ವಿವರಣೆಯ ಹಿನ್ನೆಲೆಯಲ್ಲಿ ಕಪಲಾಪುರ (ಎ) ಗ್ರಾಮ ಪಂಚಾಯಿತಿ ಸದಸ್ಯರುಗಳಾದ 1)ಶ್ರೀಮತಿ ಜೈಶ್ರೀ ಗಂಡ ಸಿದ್ರಾಮ, 2)ಶ್ರೀಮತಿ ಪ್ರಭಾವತಿ ಗಂಡ ಕಾಶಿನಾಥ, 3) ರುಕ್ಮಿಣಿ ಗಂಡ ವಿಜಯಕುಮಾರ್ ಧನ್ನೂರ, 4)ಶ್ರೀ ಅಮೃತಪ್ಪ ತಂದೆ ವೈಜನಾಥ ಇವರ ಮೇಲಿನ ಆರೋಪವು ಸಾಬೀತಾಗದೇ ಇರುವುದರಿಂದ ಇವರನ್ನು ಆರೋಪ ಮುಕ್ತರನ್ನಾಗಿ ಮಾಡಲು ಹಾಗೂ 1)ಶ್ರೀಮತಿ ಚಂದ್ರಕಲಾ ಗಂಡ ದೇವಿದಾಸ 2) ಶ್ರೀ ಸಂಜೀವಕುಮಾರ ತಂದೆ ಅಮೃತಪ್ಪ, 3) ಶ್ರೀ ಆನಂದ ತಂದೆ ಚಂದ್ರಪ್ಪ, 4)ಶಾಂತಕುಮಾರ ತಂದೆ ಶಿವರಾಜಖೆಮಶೆಟ್ಟಿ 5)ಶ್ರೀಮತಿ ಮೇರಮ್ಮ ಗಂಡ ಈರಣ್ಣ ಮತ್ತು 6) ಶ್ರೀ ಸುಜೀತಕುಮಾರ ತಂದೆ ಶಿವರಾಜ ತಳಗಟ್ಟೆ ಇವರುಗಳ ವಿರುದ್ಧದ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್

ರಾಜ್ ಅಧಿನಿಯಮ 1993ರ ಕಲಂ 43(ಎ) ರಡಿಯಲ್ಲಿ ಇವರುಗಳ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲು ಸರ್ಕಾರವು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 688 ಗ್ರಾಪಂಅ 2018 ಬೆಂಗಳೂರು, ದಿನಾಂಕ:26-08-2019.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಿದರ್ ಜಿಲ್ಲೆ ಬೀದರ್ ತಾಲ್ಲೂಕು, ಕಪಲಾಪುರ (ಎ) ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರಾದ 1)ಶ್ರೀಮತಿ ಜೈಶ್ರೀ ಗಂಡ ಸಿದ್ರಾಮ, 2)ಶ್ರೀಮತಿ ಪ್ರಭಾವತಿ ಗಂಡ ಕಾಶಿನಾಥ, 3) ರುಕ್ಮಿಣಿ ಗಂಡ ವಿಜಯಕುಮಾರ್ ಧನ್ನೂರ, 4)ಶ್ರೀ ಅಮೃತಪ್ಪ ತಂದೆ ವೈಜನಾಥ ಇವರ ಮೇಲಿನ ಆರೋಪಗಳು ಸಾಬೀತಾಗದೆ ಇರುವುದರಿಂದ ಇವರನ್ನು ಆರೋಪ ಮುಕ್ತರನ್ನಾಗಿ ಮಾಡಲು ಹಾಗೂ 1)ಶ್ರೀಮತಿ ಚಂದ್ರಕಲಾ ಗಂಡ ದೇವಿದಾಸ 2) ಶ್ರೀ ಸಂಜೀವಕುಮಾರ ತಂದೆ ಅಮೃತಪ್ಪ, 3) ಶ್ರೀ ಆನಂದ ತಂದೆ ಚಂದ್ರಪ್ಪ, 4)ಶಾಂತಕುಮಾರ ತಂದೆ ಶಿವರಾಜಖೆಮಶೆಟ್ಟಿ 5)ಶ್ರೀಮತಿ ಮೇರಮ್ಮ ಗಂಡ ಈರಣ್ಣ ಮತ್ತು 6) ಶ್ರೀ ಸುಜೀತಕುಮಾರ ತಂದೆ ಶಿವರಾಜ ತಳಗಟ್ಟೆ ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದರಿಂದ ಮತ್ತು ಅಧಿಕಾರ ದುರುಪಯೋಗ ಮಾಡಿರುವುದು ರುಜುವಾತಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)ರನ್ವಯ ಇವರುಗಳ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Narayan 26/8/19

(ಡಿ.ಜಿ ನಾರಾಯಣ)
ಉಪನಿರ್ದೇಶಕರು ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ:**

1) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ.
4) ಶ್ರೀಮತಿ ಜೈಶ್ರೀ, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
5) ಶ್ರೀಮತಿ ಚಂದ್ರಕಲಾ, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
6) ಸಂಜೀವ ಕುಮಾರ್, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
7) ಶ್ರೀಮತಿ ಪ್ರಭಾವತಿ, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
8) ರುಕ್ಮಿಣಿ, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
9) ಆನಂದ, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
10) ಶಾಂತಕುಮಾರ್, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
11) ಶ್ರೀ ಅಮೃತಪ್ಪ, ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
12) ಶ್ರೀಮತಿ ಮೇರಮ್ಮ ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ
13) ಶ್ರೀ ಸುಜೀತ ಕುಮಾರ್ ಸದಸ್ಯರು, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ

14) ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ, ಕಪಲಾಪುರ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬಿದರ್ ಜಿಲ್ಲೆ.

15) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.

16) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

17) ಗಣಕ ಕೋಶ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.